ಆ) ಮಾರುಕಟ್ಟೆ ಪ್ರಾಂಗಣದಲ್ಲಿ ಒದಗಿಸಿರುವ ಮೂಲಭೂತ ಸೌಕರ್ಯಗಳ ವಿವರ.

ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪ, ಹರಾಜು ಕಟ್ಟೆ, ಗೋದಾಮುಗಳು, ಅಂಗಡಿ ಮಳಿಗೆಗಳು, ಬ್ಯಾಂಕ್ ಸೌಲಭ್ಯ ಉಪಹಾರಗೃಹ, ಆಂತರಿಕ ರಸ್ತೆಗಳು, ತೂಕದ ಸೇತುವೆ, ಆಡಳಿತ ಕಛೇರಿ, ಆರಕ್ಷಕ ಠಾಣೆ, ರೈತರ ವಿಶ್ರಾಂತಿಭವನ, ಶ್ರಮಿಕರ ಭವನ, ಹಮಾಲರ ವಿಶ್ರಾಂತಿಗೃಹ, ಶೌಚಾಲಯಗಳು, ಒಳಚರಂಡಿ ವ್ಯವಸ್ಥೆ.

ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ವೃದ್ಧಿಯಾಗುತ್ತಿದ್ದು, ಅವಶ್ಯಕತೆಗೆ ಅನುಗುಣವಾಗಿ ಸೌಕರ್ಯಗಳನ್ನು ವಿಸ್ತರಿಸಲಾಗುವುದು.

ಇ) ಈಗಾಗಲೇ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಪ್ರಸ್ತುತ ರೂ. 42.00 ಲಕ್ಷಗಳ ವೆಚ್ಚದಲ್ಲಿ ಪ್ರಾಂಗಣದ ವಿವಿಧ ರಸ್ತೆಗಳಿಗೆ ಡಾಂಬರೀಕರಣ, ಒಳಚರಂಡಿ, ಡೆಕ್‌ಸ್ಲ್ಯಾಬ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡಿದ್ದು, ಪ್ರಗತಿಯಲ್ಲಿರುತ್ತದೆ.

ವ್ಯಾಪಾರ ವಹಿವಾಟಿಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ನಿರಂತರ ಪ್ರಕ್ರಿಯೆಯಾಗಿದ್ದು, ಅವಶ್ಯಕತೆಗೆ ಅನುಗುಣವಾಗಿ ಈ ಬಗ್ಗೆ ಅವಶ್ಯ ಕ್ರಮ ಜರುಗಿಸಲಾಗುವುದು.

ಅನುಬಂಧ

ಪ್ರಶ್ನೆ ಸಂಖ್ಯೆ: 6409

		ಸಂಖ್ಯೆಗಳಲ್ಲಿ
1.	ಅಕ್ಕಿ, ರಾಗಿ ಹಾಗೂ ಇತರೆ ದಿನಸಿ ಸಗಟು ವರ್ತಕರು	262
2.	ದಿನಸಿ, ಕಾಳು, ಬೇಳೆಯಂತಹ ದ್ವಿದಳ ಧಾನ್ಯ ವರ್ತಕರುಗಳು	214
3.	ಎಣ್ಣೆಬೀಜ ಮತ್ತು ಎಣ್ಣೆ ವ್ಯಾಪಾರಸ್ಥರು	105
4.	ಮೆಣಸು, ಗೋಡಂಬಿ, ಅಡಿಕೆ, ಸಾಸುವೆ	45
5.	ಏಲಕ್ಕಿ ಹಾಗೂ ಇತರೆ ಸಾಂಬಾರ ಪದಾರ್ಥಗಳ ವರ್ತಕರುಗಳು	
6.	ಈರುಳ್ಳಿ, ಆಲೂಗಡ್ಡೆ ಮತ್ತು ಬೆಳ್ಳುಳ್ಳಿ ವರ್ತಕರು	55
7.	ಭತ್ತದ ವ್ಯಾಪಾರಸ್ಥರು	25
8.	ಹುಣಸೇಹಣ್ಣು ವರ್ತಕರು	15
9.	ಮೆಕ್ಕೆಜೋಳ ವರ್ತಕರು	20
10.	ಹಣ್ಣು ಮತ್ತು ತರಕಾರಿಗಳು ವಹಿವಾಟು	161
	ಒಟ್ಟು	902

5613(6410) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ/ಸೇರಿದ ಪ್ರವಾಸಿ ತಾಣಗಳ/ಪ್ರೇಕ್ಷಣೀಯ ಸ್ಥಳಗಳ ವಿವರಗಳೇನು;

ಆ) ಈ ತಾಣಗಳ/ಸ್ಥಳಗಳ ವಾರ್ಷಿಕ ಆದಾಯವೆಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು);

ಇ) ಈ ತಾಣಗಳನ್ನು ಸ್ಥಳಗಳನ್ನು ಇನ್ನೂ ಆಕರ್ಷಣೀಯವಾಗಿ ರೂಪಿಸಲು ಯಾವ ಯಾವ ಕ್ರಮ ವಹಿಸಲಾಗುತ್ತಿದೆ?

ಶ್ರೀ ಕೆ. ಶ್ರೀನಿವಾಸಗೌಡ (ತೋಟಗಾರಿಕೆ ಸಚಿವರು):

ಅ) ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಪ್ರವಾಸಿ ತಾಣಗಳು/ಪ್ರೇಕ್ಷಣೀಯ ಸ್ಥಳಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. ಕೃಷ್ಣರಾಜೇಂದ್ರ ಗಿರಿಧಾಮ, ಕೆಮ್ಮಣ್ಣುಗುಂಡಿ
2. ನಂದಿ ಗಿರಿಧಾಮ, ಕೋಲಾರ ಜಿಲ್ಲೆ
3. ಬೃಂದಾವನ ಉದ್ಯಾನವನ, ಕೆ.ಆರ್.ಎಸ್. ಮಂಡ್ಯ ಜಿಲ್ಲೆ
4. ಲಾಲ್‌ಬಾಗ್ ಸಸ್ಯತೋಟ, ಬೆಂಗಳೂರು
5. ಕಬ್ಬನ್ ಉದ್ಯಾನವನ, ಬೆಂಗಳೂರು
6. ಪಂಪಾವನ ಮುನಿರಾಬಾದ್
7. ದೊಡ್ಡಾಲದಮರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
8. ಹ್ಯೂಮ್ ಪಾರ್ಕ್, ಬೆಳಗಾವಿ
9. ಫರ್ನ ಹಿಲ್ಸ್, ಊಟಿ

ಆ) ಈ ತಾಣಗಳ 2004–05ನೇ ಸಾಲಿನ ವಾರ್ಷಿಕ ಆದಾಯ ಈ ಕೆಳಕಂಡಂತಿದೆ.

ಕ್ರ. ಸಂ.	ಪ್ರೇಕ್ಷಣೀಯ ಸ್ಥಳ	ವಾರ್ಷಿಕ ಆದಾಯ (ರೂ. ಲಕ್ಷಗಳಲ್ಲಿ)
1.	ಕೃಷ್ಣರಾಜೇಂದ್ರ ಗಿರಿಧಾಮ, ಕೆಮ್ಮಣ್ಣುಗುಂಡಿ	25.22
2.	ನಂದಿ ಗಿರಿಧಾಮ, ಕೋಲಾರ	55.42
3.	ಕೃಷ್ಣರಾಜಸಾಗರ, ಮಂಡ್ಯ	14.17
4.	ಲಾಲ್‌ಬಾಗ್ ಸಸ್ಯತೋಟ, ಬೆಂಗಳೂರು	136.53
5.	ಕಬ್ಬನ್ ಉದ್ಯಾನವನ, ಬೆಂಗಳೂರು	17.81
6.	ಪಂಪವನ, ಮುನಿರಾಬಾದ್	2.10
7.	ದೊಡ್ಡಾಲದಮರ, ಬೆಂಗಳೂರು ಗ್ರಾಮಾಂತರ	0.03
8.	ಹ್ಯೂಮ್ ಪಾರ್ಕ್, ಬೆಳಗಾವಿ	0.46
9.	ಫರ್ನ ಹಿಲ್ಸ್, ಊಟಿ	1.25
	ಒಟ್ಟು	**252.99**

ಇ) ಈ ತಾಣಗಳನ್ನು ಇನ್ನೂ ಆಕರ್ಷಣೀಯವಾಗಿ ರೂಪಿಸಲು 2005–06ನೇ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಲಾಲ್‌ಬಾಗ್ ಸಸ್ಯತೋಟ, ಬೆಂಗಳೂರು
   ಎ. ಕಾಲುದಾರಿಗಳ ಅಭಿವೃದ್ಧಿ
   ಬಿ. ಹುಲ್ಲುಹಾಸುಗಳ ನವೀಕರಣ
   ಸಿ. ಕಾರಂಜಿಗಳ ಅಭಿವೃದ್ಧಿ ಹಾಗೂ ನವೀಕರಣ
   ಡಿ. ಕಬ್ಬಿಣದ ಅಲಂಕಾರಿಕಾ ಗ್ರಿಲ್‌ಗಳನ್ನು ಅಳವಡಿಸುವುದು.
   ಇ. ಅಕ್ವೇರಿಯಂ ನವೀಕರಣ
   ಎಫ್. ಹೊಸ ಜಾತಿಯ ಅಲಂಕಾರಿಕ ಗಿಡಗಳ ಖರೀದಿ
2. ಕಬ್ಬನ್ ಉದ್ಯಾನವನ, ಬೆಂಗಳೂರು
   ಎ. ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಪಕ್ಕದಲ್ಲಿ ಹುಲ್ಲುಹಾಸು ಅಭಿವೃದ್ಧಿ ಪಡಿಸುವುದು.
   ಬಿ. ರಿಂಗ್ ವುಡ್ ಸರ್ಕಲ್ ಉದ್ಯಾನವನಕ್ಕೆ ಅಲಂಕಾರಿಕ ಗ್ರಿಲ್ ಅಳವಡಿಸುವುದು.
   ಸಿ. ಕಬ್ಬನ್ ಉದ್ಯಾನವನದಲ್ಲಿರುವ ಗಿಡಮರಗಳಿಗೆ ನಾಮಫಲಕಗಳನ್ನು ಹಾಕಿಸುವುದು.
   ಡಿ. ಗೆಜೆಬೋ ಐಲ್ಯಾಂಡ್‌ನಲ್ಲಿ ಉಳಿದಿರುವ ವಿಭಾಗಕ್ಕೆ ಅಲಂಕಾರಿಕ ಗ್ರಿಲ್ ಅಳವಡಿಸುವುದು.
3. ಶ್ರೀ ಕೃಷ್ಣರಾಜೇಂದ್ರ ಗಿರಿಧಾಮ, ಕೆಮ್ಮಣ್ಣುಗುಂಡಿ
   ಎ. ವಸತಿಗೃಹಗಳಲ್ಲಿ ಬಾತ್ ರೂಂ ದುರಸ್ತಿಪಡಿಸಿ ಟೈಲ್ಸ್ ಅಳವಡಿಸುವುದು.
   ಬಿ. ನೀರಿನ ಪೈಪುಗಳ ದುರಸ್ತಿ
4. ನಂದಿ ಗಿರಿಧಾಮ, ಕೋಲಾರ
   ಎ. ಅತಿಥಿಗೃಹಗಳ ಸ್ವಚ್ಛತೆ ಮತ್ತು ನಿರ್ವಹಣೆ
   ಬಿ. ಹೊಸ ಗಿಡಗಳ ಖರೀದಿ
   ಸಿ. ನೀರಿನ ನಿರ್ವಹಣೆ
5. ಕೃಷ್ಣರಾಜಸಾಗರ, ಮಂಡ್ಯ
   ಎ. ಸ್ವಯಂಚಾಲಿತ ನೀರಾವರಿ ಸೌಲಭ್ಯ ಒದಗಿಸುವುದು
   ಬಿ. ಉದ್ಯಾನವನದ ನವೀಕರಣ
6. ಪಂಪವನ, ಮುನಿರಾಬಾದ್
   ಎ. ಕಾರಂಜಿ ಹಾಗೂ ಬೀದಿ ದೀಪಗಳ ದುರಸ್ತಿ
   ಬಿ. ನೀರಾವರಿ ವ್ಯವಸ್ಥೆ
   ಸಿ. ಉದ್ಯಾನವನ ಸಾಮಾನ್ಯ ಸ್ವಚ್ಛತೆ
7. ದೊಡ್ಡಾಲದಮರ, ಬೆಂಗಳೂರು (ಗ್ರಾಮಾಂತರ)
   ಎ. ಆಲದಮರ ಹಬ್ಬಿರುವ ಪೂರ್ತಿ ಜಾಗದಲ್ಲಿ ಅಲಂಕಾರಿಕ ಗಿಡಗಳು, ಬಳ್ಳಿಗಳು ಇತ್ಯಾದಿ, ವಿವಿಧ ಜಾತಿಯ ಹೂಗಿಡಗಳನ್ನು ಹಾಕಿ ಉದ್ಯಾನವನವನ್ನು ನಿರ್ವಹಣೆ ಮಾಡಲಾಗುತ್ತಿದೆ.

ಬಿ. ಆಲದ ಮರದ ಸುತ್ತಲೂ ಬೇಲಿಯನ್ನು ನಿರ್ಮಿಸಿ ಸಂರಕ್ಷಿಸಲಾಗಿದೆ.

8. ಹ್ಯೂಮ್ ಪಾರ್ಕ್, ಬೆಳಗಾವಿ

ಎ. ತೋಟಗಾರಿಕೆ ಪರಿಕರಗಳ ಖರೀದಿ

ಬಿ. ಉದ್ಯಾನವನಗಳ ಸ್ವಚ್ಛತೆ ಹಾಗೂ ನಿರ್ವಹಣೆ.

9. ಫರ್ನ್ ಹಿಲ್ಸ್, ಊಟಿ

ಎ. ಅಲಂಕಾರಿಕ ಗಿಡಗಳ ಖರೀದಿ

ಬಿ. ತೋಟಗಾರಿಕೆ ಪರಿಕರಗಳ ಖರೀದಿ

ಸಿ. ಹುಲ್ಲುಹಾಸುಗಳ ನಿರ್ಮಾಣ

ಡಿ. ಹೊಸ ಗೇಟುಗಳ ನಿರ್ಮಾಣ

5614(6411) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಬೆಲೆ ಅಂಗಡಿಗಳ ಮೂಲಕ ನೀಡಲಾಗುತ್ತಿರುವ ಪಡಿತರಗಳು ಯಾವುವು ಹಾಗೂ ಒಂದು ಪಡಿತರ ಚೀಟಿಗೆ ನೀಡುತ್ತಿರುವ ಪಡಿತರಗಳ ಪ್ರಮಾಣವೆಷ್ಟು;

ಆ) ಹಾಲಿ ನೀಡುತ್ತಿರುವ ಪಡಿತರ ಪ್ರಮಾಣ ಹೆಚ್ಚಿಸುವ ಬಗ್ಗೆ ಸರ್ಕಾರದ ನಿಲುವೇನು;

ಇ) ನ್ಯಾಯಬೆಲೆ ಅಂಗಡಿಗಳ ಮೂಲಕ ರಾಗಿ, ಜೋಳವನ್ನು ಪಡಿತರವಾಗಿ ನೀಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ನ್ಯಾಯಬೆಲೆ ಅಂಗಡಿಗಳ ಮೂಲಕ ನೀಡಲಾಗುತ್ತಿರುವ ಪಡಿತರಗಳು ಮತ್ತು ಪ್ರಮಾಣ ಈ ಕೆಳಕಂಡಂತಿದೆ.

ಕ್ರ. ಸಂ.	ಪಡಿತರ ಪದಾರ್ಥ	ಎಎವೈ (ಕೆಜಿ)	ಬಿಪಿಎಲ್ (ಕೆಜಿ)	ಎಪಿಎಲ್ (ಕೆಜಿ)
1	ಅಕ್ಕಿ	28	20	--
2	ಗೋಧಿ	7	5	--
3	ಸಕ್ಕರೆ	1.50	1.50	--
4	ರಾಗಿ	7	5	--

5. ಸೀಮೆಎಣ್ಣೆ :- ಎಎವೈ, ಬಿಪಿಎಲ್ ಮತ್ತು ಎಪಿಎಲ್ ಅನಿಲ ರಹಿತ ಪಡಿತರ ಚೀಟಿದಾರರಿಗೆ ಅ.ಪ. ಪ್ರದೇಶದಲ್ಲಿ 8 ಲೀಟರ್, ಪಟ್ಟಣ ಪ್ರದೇಶದಲ್ಲಿ 6 ಲೀಟರ್, ಗ್ರಾಮಾಂತರ ಪ್ರದೇಶದಲ್ಲಿ 4 ಲೀಟರ್‌ನಂತೆ ಸೀಮೆಎಣ್ಣೆ ವಿತರಿಸಲಾಗುತ್ತಿದೆ.

ಎಪಿಎಲ್ ಪಡಿತರ ಚೀಟಿದಾರರಿಂದ ಆಹಾರಧಾನ್ಯ ಬೇಡಿಕೆ ಇಲ್ಲದಿರುವುದರಿಂದ ಆಹಾರಧಾನ್ಯಗಳ ಹಂಚಿಕೆಯನ್ನು ಮಾಡಲಾಗುತ್ತಿರುವುದಿಲ್ಲ.

ಆ) ಕೇಂದ್ರ ಸರ್ಕಾರದಿಂದ ಹಂಚಿಕೆಯಾಗುತ್ತಿರುವ ಆಹಾರಧಾನ್ಯಗಳನ್ನು ಕಾರ್ಡುದಾರರಿಗೆ ನೀಡಲಾಗುತ್ತಿದೆ. ಪಡಿತರ ಪ್ರಮಾಣವನ್ನು ಹೆಚ್ಚಿಸುವ ನಿಲುವು ಸರ್ಕಾರದ ಮಟ್ಟದಲ್ಲಿರುವುದಿಲ್ಲ.